# ಕುವೆಂಪು ವಿಶ್ವವಿದ್ಯಾಲಯ

Accredited by NAAC With "A" Grade, 86th All India Rankings (NIRF) 2019, Four Star KSURF 2022 and secured 45th Place in SCIMAGO Institutional Rankings


ಡಾ. ಉದ್ದಗಟ್ಟಿ ವೆಂಕಟೇಶ್
*ಸಂಚಾಲಕರು*
*ಮೊಬೈಲ್ ಸಂಖ್ಯೆ:*
*9980190713*

ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಘಟಕ
ಜ್ಞಾನಸಹ್ಯಾದ್ರಿ, ಶಂಕರಘಟ್ಟ.
ದೂ: 08282-256329
ಇಮೈಲ್: scstcellkuvempu@gmail.com


ಸಂಖ್ಯೆ: ಕುವಿ:ಪ.ಜಾ:ಪ.ಪಂ.ಘ/126/2022-23

ದಿನಾಂಕ: 28-09-2022

## ಪ್ರಕಟಣೆ

ವಿಷಯ: ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟಜಾತಿ: ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಪ್ರೋತ್ಸಾಹಧನಕ್ಕಾಗಿ ಅರ್ಜಿ ಸಲ್ಲಿಸುವ ಕುರಿತು.

******

2021-22 ನೇ ಶೈಕ್ಷಣಿಕ ಸಾಲಿನಲ್ಲಿ ವಿವಿಧ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಂತಿಮ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ಹಾಗೂ ವಿದ್ಯಾರ್ಥಿವೇತನಕ್ಕೆ ಅರ್ಹರಿರುವ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳು ತಮ್ಮ ಅಧ್ಯಯನಕ್ಕೆ ಪೂರಕವಾದ ಶೈಕ್ಷಣಿಕ ಪ್ರವಾಸ ಕೈಗೊಳ್ಳಲು ಪ್ರತಿ ವಿದ್ಯಾರ್ಥಿಗೆ ತಲಾ ರೂ.1000/- (ಒಂದು ಸಾವಿರ ರೂಪಾಯಿಗಳು ಮಾತ್ರ) ಗಳ ಪ್ರೋತ್ಸಾಹಧನವನ್ನು ನೀಡಲಾಗುವುದು.

ಆದ್ದರಿಂದ ಸದರೀ ಸಹಾಯಧನವನ್ನು ಪಡೆಯಲು ಬಯಸುವ ವಿಭಾಗದ ವಿದ್ಯಾರ್ಥಿಗಳು ಶೈಕ್ಷಣಿಕ ಪ್ರವಾಸ ಕೈಗೊಂಡಿರುವ ಕುರಿತು ಶೈಕ್ಷಣಿಕ ವಿಭಾಗದಿಂದ ಪ್ರವಾಸಕ್ಕೆ ಅನುಮತಿ ಪಡೆದಲ್ಲಿ ಮಾತ್ರ ಅರ್ಜಿ ಸಲ್ಲಿಸುವುದು. ನಿಗದಿತ ಅರ್ಜಿಯೊಂದಿಗೆ ಭರ್ತಿ ಮಾಡಲಾದ ನಮೂನೆಯನ್ನು ಆಯಾ ವಿಭಾಗಕ್ಕೆ ಸಲ್ಲಿಸುವುದು. ಆಯಾ ವಿಭಾಗದ ಮುಖ್ಯಸ್ಥರು ಸ್ವೀಕೃತವಾದ ಅರ್ಜಿಗಳನ್ನು ಕ್ರೋಢೀಕರಿಸಿ, ದಿನಾಂಕ: 20-10-2022 ರೊಳಗಾಗಿ ವಿಭಾಗದವರು ಶೈಕ್ಷಣಿಕ ಪ್ರವಾಸ ಕೈಗೊಂಡಿರುವ ಬಗ್ಗೆ ದೃಢೀಕರಣದೊಂದಿಗೆ ಎಸ್‌ಸಿ : ಎಸ್‌ಟಿ ಘಟಕದ ಕಛೇರಿಗೆ ಕಳುಹಿಸುವುದು. ನಿಗದಿತ ಅವಧಿಯ ನಂತರ ಸಲ್ಲಿಸುವ ಪ್ರಸ್ತಾವನೆಗಳನ್ನು ಅಂಗೀಕರಿಸಲಾಗುವುದಿಲ್ಲ. ನಿಗದಿತ ಅರ್ಜಿ ನಮೂನೆಯನ್ನು ವಿಶ್ವವಿದ್ಯಾಲಯದ ಅಂತರ್ಜಾಲ ವಿಳಾಸ :http://www.kuvempu.ac.in/eng/download.php ಪಡೆದುಕೊಳ್ಳುವಂತೆ ಸೂಚಿಸಿದೆ.

### ಲಗತ್ತಿಸಬೇಕಾದ ದಾಖಲೆಗಳು:

1. ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರವನ್ನು ದೃಢೀಕರಿಸಿ ಲಗತ್ತಿಸಿರಬೇಕು. (ಆದಾಯ ಪ್ರಮಾಣ ಪತ್ರವು 5 ವರ್ಷದ ವ್ಯಾಪ್ತಿಗೆ ಒಳಪಟ್ಟಿರಬೇಕು ಹಾಗೂ ಆರ್.ಡಿ.ಸಂಖ್ಯೆ ಹೊಂದಿರಬೇಕು).
2. ಉಳಿತಾಯ ಖಾತೆ ಎಸ್‌ಬಿಐ ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ ಮತ್ತು ವಿದ್ಯಾರ್ಥಿಗಳ ಫೋನ್ ನಂಬರ್/ಮೊಬೈಲ್ ನಂಬರ್ ಕಡ್ಡಾಯವಾಗಿ ನಮೂದಿಸಬೇಕು.

ಕರಡು ಕುಲಸಚಿವರಿಂದ ಅನುಮೋದನೆಯಾಗಿದೆ.

ಸಂಚಾಲಕರು

ಸಂಚಾಲಕರು
ಪರಿಶಿಷ್ಟಜಾತಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಘಟಕ
ಕುವೆಂಪು ವಿಶ್ವವಿದ್ಯಾಲಯ
ಜ್ಞಾನಸಹ್ಯಾದ್ರಿ - 577 451.
ಶಿವಮೊಗ್ಗ ಜಿಲ್ಲೆ.

ಗೆ,
ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ / ಶಿವಮೊಗ್ಗ / ಕಡೂರು / ಚಿಕ್ಕಮಗಳೂರು.

ಪ್ರತಿಗಳು:
1. ಮಾನ್ಯ ಕುಲಪತಿಗಳು/ಕುಲಸಚಿವರು/ಹಣಕಾಸು ಅಧಿಕಾರಿ/ರವರ ಆಪ್ತಕಾರ್ಯಾಲಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದಿ, ಶಂಕರಘಟ್ಟ.
2. ಕಛೇರಿ ಪ್ರತಿ/ಹುಂಡಿ ಪ್ರತಿ.

ಭಾವ ಚಿತ್ರ

# ಅರ್ಜಿ ನಮೂನೆ

**20....20....ನೇ ಶೈಕ್ಷಣಿಕ ಸಾಲಿನಲ್ಲಿ ಶೈಕ್ಷಣಿಕ ಪ್ರವಾಸ ಕೈಗೊಂಡಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಂತಿಮ ವರ್ಷದ ವಿದ್ಯಾರ್ಥಿಗಳಿಗೆ (ಆದಾಯ ಮಿತಿ ರೂ. 2.50 ಲಕ್ಷದ ಒಳಗೆ ) ಪ್ರೋತ್ಸಾಹ ಧನಕ್ಕಾಗಿ ಅರ್ಜಿ**

| | | | | | | |
|---|---|---|---|---|---|---|
| 1. | ವಿದ್ಯಾರ್ಥಿಯ ಪೂರ್ಣ ಹೆಸರು | | | | | |
| 2. | ಲಿಂಗ | ಪುರುಷ / ಸ್ತ್ರೀ / ಇತರೇ | | | | |
| 3. | ಚಾಲ್ತಿಯಲ್ಲಿರುವ ದೂರವಾಣಿ / ಮೊಬೈಲ್ ಸಂಖ್ಯೆ:<br>ಇ-ಮೇಲ್ ವಿಳಾಸ : | | | | | |
| 4. | ವ್ಯಾಸಂಗ ಮಾಡುತ್ತಿರುವ ಸ್ನಾತಕೋತ್ತರ ವಿಭಾಗ | | | | | |
| 5. | ವಿದ್ಯಾರ್ಥಿಯ ಪರೀಕ್ಷಾ ನೋಂದಣಿ ಸಂಖ್ಯೆ: | | | | | |
| 6. | ಅ)ಪರಿಶಿಷ್ಟ ಜಾತಿಯವರೇ / ಪರಿಶಿಷ್ಟ ಪಂಗಡದವರೇ | ಪ. ಜಾತಿ / ಪ. ಪಂಗಡ | ಉಪ ಜಾತಿ | ಚಾಲ್ತಿಯಲ್ಲಿರುವ ಆದಾಯ ಪ್ರಮಾಣ ಪತ್ರ RD No: | ಜಾತಿ ಪ್ರಮಾಣ ಪತ್ರ R D No: | |
| | | | | | | |
| 7. | ವಿದ್ಯಾರ್ಥಿಯು ಎಸ್‌ಎಸ್ ಪಿಯಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದ SAT ID No: | | | | | |
| 8. | ವಿದ್ಯಾರ್ಥಿಯ ಆಧಾರ್ ಸಂಖ್ಯೆ:<br>(ಪ್ರತಿ ಲಗತ್ತಿಸುವುದು) | | | | | |
| 9. | ವಿದ್ಯಾರ್ಥಿಯ ಖಾಯಂ ವಿಳಾಸ : | | | | | |
| 10. | ಶೈಕ್ಷಣಿಕ ಪ್ರವಾಸ ಕೈಗೊಂಡ ವಿಷಯ ಮತ್ತು ಸ್ಥಳ ( ಶೈಕ್ಷಣಿಕ ಪ್ರವಾಸಕ್ಕೆ ಅನುಮತಿಸಿದ ವಿಶ್ವವಿದ್ಯಾಲಯದ ಆದೇಶದ ಪ್ರತಿ ಲಗತ್ತಿಸುವುದು) | | | | | |
| 11. | ವಿದ್ಯಾರ್ಥಿಯ ಉಳಿತಾಯ ಖಾತೆ ಸಂಖ್ಯೆ:<br>ಬ್ಯಾಂಕಿನ ಹೆಸರು :<br>ಶಾಖೆಯ ಹೆಸರು :<br>ಐಎಫ್‌ಎಸ್ ಸಿ ಕೋಡ್ :<br>(ಪಾಸ್ ಪುಸ್ತಕದ ಜೆರಾಕ್ಸ್ ಪ್ರತಿ) | **ಆಧಾರ್ ಸಂಖ್ಯೆಯು ಕಡ್ಡಾಯವಾಗಿ ಬ್ಯಾಂಕ್ ಉಳಿತಾಯ ಖಾತೆಗೆ ಜೋಡಣೆಯಾಗಿರಬೇಕು** | | | | |
| 12. | ಶೈಕ್ಷಣಿಕ ಪ್ರವಾಸಕ್ಕೆ ವಿಭಾಗದಿಂದ ಆಗಮಿಸಿದ ಅಧ್ಯಾಪಕರ ಹೆಸರು | | | | | |

**ದಿನಾಂಕ:**
**ಸ್ಥಳ :**

**ವಿದ್ಯಾರ್ಥಿಯ ಸಹಿ**

**<u>ವಿಭಾಗದ ಮುಖ್ಯಸ್ಥರ ಸಹಿ</u>**

ಮೇಲ್ಕಂಡ ಮಾಹಿತಿಯು ಕ್ರಮಬದ್ಧವಾಗಿದ್ದು, ವಿದ್ಯಾರ್ಥಿಯು ಶೈಕ್ಷಣಿಕ ಉದ್ದೇಶಕ್ಕಾಗಿ ನಿಗದಿಪಡಿಸಿರುವಂತಹ ಶೈಕ್ಷಣಿಕ ಪ್ರವಾಸವನ್ನು ತೃಪ್ತಿಕರವಾಗಿ ಪೂರೈಸಿರುತ್ತಾರೆ ಹಾಗೂ ಧನಸಹಾಯ ಪಡೆಯಲು ಅರ್ಹರಾಗಿರುತ್ತಾರೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

**ದಿನಾಂಕ:**
**ಸ್ಥಳ :**

**ಮೊಹರಿನೊಂದಿಗೆ**
**ವಿಭಾಗದ ಅಧ್ಯಕ್ಷರು / ಮುಖ್ಯಸ್ಥರ ಸಹಿ**